
# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣ

**ಯು.ಎಸ್. ಸಂಗನಾಳಮಠ**




"ಯಾವ ವಿದ್ಯೆಯ ಅಭಿವೃದ್ಧಿಯಿಂದ ಸಾಧಾರಣರನ್ನು ಜೀವನ ಸಂಗ್ರಾಮದಲ್ಲಿ ಸಮರ್ಥರನ್ನಾಗಿ ಮಾಡುವುದಕ್ಕಾಗುವುದಿಲ್ಲವೋ, ಯಾವುದು ಮನುಷ್ಯನಿಗೆ ಚಾರಿತ್ರ್ಯಬಲ, ಪರಸೇವಾ ತತ್ಪರತೆ ಸಿಂಹಸಾಹಸ ಇವುಗಳನ್ನು ಒದಗಿಸುವುದಿಲ್ಲವೋ ಅದು ವಿದ್ಯೆಯೇನು? ಯಾವ ವಿದ್ಯೆಯಿಂದ ಜೀವನದಲ್ಲಿ ತನ್ನ ಕಾಲಿನ ಮೇಲೆ ತಾನು ನಿಂತುಕೊಳ್ಳಬಹುದೋ ಅದೇ ವಿದ್ಯೆ. " (ಕೃತಿಶ್ರೇಣಿ, ಪು.೧೨೭).

ದೇಶದ ಇಂದಿನ ಶಿಕ್ಷಣ ಪದ್ಧತಿಯ ಬಗ್ಗೆ ಕುರಿತು ಚಿಂತಿಸುವಾಗ, ಸ್ವಾಮಿ ವಿವೇಕಾನಂದರು ೧೮೯೮ರಲ್ಲಿ ತಮ್ಮ ಶಿಷ್ಯ ಶರತ್ ಚಂದ್ರ ಚಕ್ರವರ್ತಿ ಅವರಿಗೆ ಹೇಳಿದ ಈ ಮಾತುಗಳು ಈಗಲೂ ಪ್ರಸ್ತುತ ಎನಿಸುತ್ತದೆ.

ಒಬ್ಬ ವ್ಯಕ್ತಿ ಹಲವು ಪರೀಕ್ಷೆಗಳಲ್ಲಿ ತೇರ್ಗಡೆಯಾದರೆ, ಉತ್ತಮ ಭಾಷಣಗಳನ್ನು ಕೊಡಲು ಸಮರ್ಥನಾದರೆ ಅವನನ್ನು ಸುಶಿಕ್ಷಿತ ಎನ್ನುತ್ತಾರೆ. ಜನಸಾಮಾನ್ಯರಿಗೆ ಜೀವನದ ಹೋರಾಟಗಳನ್ನು ಎದುರಿಸಲು ಸಾಮರ್ಥ್ಯವನ್ನು ಕೊಡದೆ, ನೈತಿಕ ಬಲವನ್ನೂ, ದಾನಶೀಲತೆಯನ್ನೂ, ಸಿಂಹಧೈರ್ಯವನ್ನೂ ಪ್ರಕಾಶಗೊಳಿಸಲಾರದ ಶಿಕ್ಷಣ ಆ ಹೆಸರಿಗೆ ಅರ್ಹವೇ? ತನ್ನ ಕಾಲುಗಳ ಮೇಲೆ ನಿಂತುಕೊಳ್ಳುವ ಬಲವನ್ನು ಕೊಡುವ ಶಿಕ್ಷಣವೇ ನಿಜವಾದ ಶಿಕ್ಷಣ.

ಗುಲಾಮರನ್ನು, ಸತ್ವಹೀನ ವ್ಯಕ್ತಿಗಳನ್ನು ಸೃಷ್ಟಿಸುವ ಸಲುವಾಗಿ ಲಾರ್ಡ್ ಮೆಕಾಲೆ ರೂಢಿಸಿದ ಶಿಕ್ಷಣ ಪದ್ಧತಿ ಹೆಚ್ಚು-ಕಡಿಮೆ ಈಗಲೂ ಮುಂದುವರಿದಿದೆ. ಭಾರತೀಯರನ್ನು ಸ್ವಯಂ ಆಡಳಿತಕ್ಕೆ ಯೋಗ್ಯರನ್ನಾಗಿ ಮಾಡದೆ, ಇಂಗ್ಲಿಷ್ ಶಿಕ್ಷಣ ಹೊಂದಿದ ಭಾರತೀಯರನ್ನು ಕೆಳದರ್ಜೆಯ ಅಧಿಕಾರ ವರ್ಗಕ್ಕೆ ಅರ್ಹರನ್ನಾಗಿಸುವುದೇ ಇದರ ಉದ್ದೇಶವಾಗಿತ್ತು. ಆದರೆ ಕೆಲವು ವಿದ್ಯಾವಂತ ಯುವಕರು ಅಂದಿನ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ನಿರ್ಮೂಲ ಮಾಡಲು ಶ್ರಮಿಸಿದ್ದಲ್ಲದೇ ಯುರೋಪಿನಲ್ಲಿ ಆಗುತ್ತಿದ್ದ ವೈಜ್ಞಾನಿಕ-ರಾಜಕೀಯ ಚಿಂತನೆಗಳನ್ನು ಈ ದೇಶಕ್ಕೆ ತಂದರು. ಇದು ಸಾಧ್ಯವಾದದ್ದು ವಿದೇಶೀಯರೆ ಕಲಿಸಿಕೊಟ್ಟ ಭಾಷೆ ಮತ್ತು ಅದರೊಂದಿಗೆ ಬಂದ ಹೊಸ ವಿಚಾರಗಳಿಂದ. ರಾಜಾರಾಂ ಮೋಹನ ರಾಯ್, ಕೇಶವ ಚಂದ್ರ ಸೇನ್, ಸ್ವಾಮಿ ವಿವೇಕಾನಂದರು, ಅರವಿಂದರು ಮುಂತಾದ ಪ್ರತಿಭಾವಂತರು ಉದಯವಾದರು.

ಸ್ವಾತಂತ್ರ್ಯಾನಂತರ ಹಲವಾರು ಶಿಕ್ಷಣ ಆಯೋಗಗಳು ರಚನೆಯಾಗಿ, ಸಲಹೆಗಳನ್ನು ಕೊಟ್ಟರೂ ಅವು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದಿರುವುದಿಲ್ಲ. ಶಾಲಾಭ್ಯಾಸವನ್ನು ಮುಗಿಸಿದ ಪ್ರತಿ ವ್ಯಕ್ತಿಯಲ್ಲಿ ಅವನದೆ ಆದ ಕೆಲವು ಸಾಮರ್ಥ್ಯಗಳು ಇರುತ್ತವೆ. ಈ ಸಾಮರ್ಥ್ಯಕ್ಕೆ ಅನುಗುಣವಾಗಿ ಅವನಿಗೆ ಯುಕ್ತ ಮಾರ್ಗದಲ್ಲಿ ತರಬೇತಿ ಕೊಡುವ ಶಿಕ್ಷಣ ಪದ್ಧತಿ ಬೇಕಾಗಿದೆ. ನಮ್ಮಲ್ಲಿ ಇಂದು ಎಲ್ಲ ವಿದ್ಯಾರ್ಥಿಗಳೂ ಕೇವಲ ಕೆಲವೇ ಕ್ಷೇತ್ರಗಳಲ್ಲಿ ಆಸಕ್ತಿ ವಹಿಸುತ್ತಿದ್ದು ಇದು ಅಹಿತಕರ ಸ್ಪರ್ಧೆ ಹಾಗೂ ಮಾನಸಿಕ ಒತ್ತಡಕ್ಕೆ ದಾರಿಯಾಗಿದೆ. ವೃತ್ತಿಗೌರವವನ್ನು ಭಾರತೀಯರು ಬೆಳೆಸಿಕೊಳ್ಳಬೇಕು. ಯಾವುದೇ ವೃತ್ತಿ ಕೀಳಲ್ಲ ಎಂಬ ಮನೋಭಾವ ನಮ್ಮಲ್ಲಿ ಇಂದು ಬರಬೇಕು. ಆತ್ಮಾಭಿಮಾನ ಹಾಗೂ ಆತ್ಮವಿಶ್ವಾಸವಿದ್ದರೆ ಸಣ್ಣ ವೃತ್ತಿಯಿಂದಲೂ ಉತ್ತಮ ಜೀವನ ಸಾಧ್ಯ. ಅಮೆರಿಕದಲ್ಲಿ ಈ ತರಹದ ವ್ಯವಸ್ಥೆ ಇದೆ.

ವಿವೇಕಾನಂದರ ಅಭಿಪ್ರಾಯದ ಪ್ರಕಾರ ನಮ್ಮ ದೇಶದಲ್ಲಿ ಇರುವ ದೋಷದ ಮೂಲ ಬಡವರ ಶೋಚನೀಯ ಸ್ಥಿತಿ. ಪ್ರತಿ ಹಳ್ಳಿಯಲ್ಲಿ ಒಂದು ಪಾಠಶಾಲೆ ತೆರೆದರೂ ಅದರಿಂದ ಏನೂ ಪ್ರಯೋಜನವಾಗಿಲ್ಲ. ಶಾಲೆಗೆ ಹೋಗುವ ಬದಲು ಬಡವರ ಮಕ್ಕಳು ಹೊಲದಲ್ಲಿ ತಮ್ಮ ತಂದೆತಾಯಿಯರ ಸಹಾಯಕ್ಕೆ



ಯು.ಎಸ್. ಸಂಗನಾಳಮಠರು ಹೊನ್ನಾಳಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರು. ಶಿಕ್ಷಣ ಕುರಿತಾದ ಸ್ವಾಮಿ ವಿವೇಕಾನಂದರ ವಿಚಾರಗಳ ಬಗ್ಗೆ ಚಿಂತನೆಯನ್ನು ಮಾಡಿ ಲೇಖನವನ್ನು ತಮ್ಮ ಅನುಭವದ ಬಲದಿಂದ ಬರೆದಿರುತ್ತಾರೆ.

ಹೋಗುವರು. ಇಲ್ಲವೆ, ಏನಾದರೂ ಸಂಪಾದಿಸಲಿಕ್ಕೆ ಪ್ರಯತ್ನಿಸುವರು—ಇದು ಅನಿವಾರ್ಯವೂ ಕೂಡ. "ಈಗ ಬೆಟ್ಟ ಮಹಮ್ಮದನ ಸಮೀಪಕ್ಕೆ ಹೋಗದೇ ಇದ್ದರೆ, ಮಹಮ್ಮದನು ಬೆಟ್ಟದ ಸಮೀಪಕ್ಕೆ ಬರಬೇಕು. ಬಡವರ ಮಕ್ಕಳ ಹತ್ತಿರ ಶಿಕ್ಷಣ ಹೋಗಬೇಕು. ಹಳ್ಳಿಯಿಂದ ಹಳ್ಳಿಗೆ ಹೋಗುವ ಧರ್ಮಬೋಧಕರು ಧಾರ್ಮಿಕ ವಿಚಾರಗಳ ಜೊತೆಗೆ ಲೌಕಿಕ ವಿಷಯಗಳನ್ನೂ ಕೂಡ ಕಲಿಸಬೇಕು. ತಮ್ಮ ಜೊತೆಗೆ ಮಾಯಾದೀಪ, ಕೃತಕಗೋಳ ಭೂಪಟಗಳನ್ನೂ ತೆಗೆದುಕೊಂಡು, ಖಗೋಳಶಾಸ್ತ್ರ ಭೂಗೋಳ ಶಾಸ್ತ್ರಗಳನ್ನೂ ತಿಳಿಸಬಹುದು. ಬೇರೆ ಬೇರೆ ದೇಶಗಳಿಗೆ ಸಂಬಂಧಿಸಿದ ಕಥೆಗಳನ್ನು ಹೇಳುವುದರ ಮೂಲಕ ತಮ್ಮ ಇಡೀ ಜೀವಮಾನದಲ್ಲೇ ಪುಸ್ತಕಗಳಿಂದ ಗ್ರಹಿಸುವುದಕ್ಕಿಂತ ನೂರು ಪಾಲಿನಷ್ಟು ಹೆಚ್ಚು ವಿಷಯಗಳನ್ನು ಅವರು ಗ್ರಹಿಸುವಂತೆ ಮಾಡಬಹುದು. ಆಧುನಿಕ ವಿಜ್ಞಾನಶಾಸ್ತ್ರಗಳ ಸಹಾಯದಿಂದ ಅವರ ತಿಳಿವಳಿಕೆಯನ್ನು ಬೆಳಗಿಸಿ ಇತಿಹಾಸ, ಭೂಗೋಳ, ಸಾಹಿತ್ಯ, ವಿಜ್ಞಾನ ಮತ್ತು ಅವುಗಳೊಂದಿಗೆ ಅತ್ಯಂತ ಗಹನವಾದ ಧಾರ್ಮಿಕ ಸತ್ಯ ಗಳನ್ನೂ ಸಹ ಬೋಧಿಸಬಹುದು" ಎಂದಿದ್ದಾರೆ ಸ್ವಾಮೀಜಿ. ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯು ನೆಲೆನಿಂತಾಗ ಮಾತ್ರ ಹಳ್ಳಿಗಳ ಮಟ್ಟದಲ್ಲಿ ನಿಜವಾದ ಬದಲಾವಣೆ ಸಾಧ್ಯ.

ಇಂದಿನ ಶಿಕ್ಷಣದ ಕುಂದುಕೊರತೆಗಳು ಯಾವುವು ಎಂದು ಪ್ರಶ್ನಿಸಿದಾಗ ವಿವೇಕಾನಂದರು ಈ ರೀತಿ ಉತ್ತರಿಸಿದರು: "ಈಗ ಶಾಲೆ-ಕಾಲೇಜುಗಳಿಂದ ದೊರೆಯುತ್ತಿರುವ ವಿದ್ಯೆಯಿಂದ ವ್ಯಕ್ತಿ ಅಜೀರ್ಣ ರೋಗದಿಂದ ನರಳುವವರ ಗುಂಪಿಗೆ ಸೇರಿದಂತಿದ್ದು, ಅವನನ್ನು ಪೂರ್ಣ ಮನುಷ್ಯನನ್ನಾಗಿ ರೂಪಿಸುತ್ತಿಲ್ಲ. ಇದು ಸಂಪೂರ್ಣ ನಿಷೇಧಾತ್ಮಕ ಶಿಕ್ಷಣ. ಅಂದರೆ ಮನಸ್ಸು ಚಿಂತಿಸುವುದನ್ನು ಕಲಿಯುವ ಮೊದಲೇ ಅದನ್ನು ವಿಕೃತವಾದ ವಿಷಯಗಳಿಂದ ತುಂಬಿಬಿಡುತ್ತಾರೆ. ಮನೋನಿಗ್ರಹವನ್ನು ಮೊದಲು ಕಲಿಸಬೇಕು." ನಮ್ಮ ಧರ್ಮ ಮತ್ತು ಪದ್ಧತಿಗಳೆಲ್ಲ ಪೊಳ್ಳು, ಅರ್ಥಹೀನ ಮತ್ತು ಪಾಶ್ಚಾತ್ಯರದ್ದು ಏನೇನುಂಟೋ ಅವೆಲ್ಲ ಒಳ್ಳೆಯವು ಎಂಬ ಒಂದು ಮನೋವಿಕೃತಿ ಯನ್ನೇ ನಾವು ಇಂದು ಶಿಕ್ಷಣವೆಂದು ಕರೆಯುತ್ತಾ, ಶಿಕ್ಷಣವೆಂದು ಹೆಸರಿಗೆ ಅಪಚಾರವೆಸಗುತ್ತಿದ್ದೇವೆ.

ನಿಜವಾದ ಶಿಕ್ಷಣ ಎಂದರೇನು ಎಂಬ ಪ್ರಶ್ನೆಗೆ ಸ್ವಾಮೀಜಿ ಹೇಳುತ್ತಾರೆ: "ಮನುಷ್ಯನಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯನ್ನು ವ್ಯಕ್ತಪಡಿಸುವುದೇ ಶಿಕ್ಷಣ. ಶಿಕ್ಷಣವೆಂದರೆ ಗ್ರಂಥಾಧ್ಯಯನವಲ್ಲ, ವಿಷಯಗಳ ಸಂಗ್ರಹವಲ್ಲ. ಇಚ್ಛೆಯ ಪ್ರವಾಹವನ್ನೂ ಅಭಿವ್ಯಕ್ತಿಯನ್ನೂ ನಿಯಂತ್ರಣಗೊಳಿಸಿ ಅದು ಫಲಪ್ರದವಾಗುವಂತೆ ಮಾಡುವ ತರಬೇತಿಯೇ ಶಿಕ್ಷಣ. ಶಿಕ್ಷಣ ಪಡೆಯಬೇಕಾದರೆ ಏಕಾಗ್ರತೆ ಮತ್ತು ಅನಾಸಕ್ತಿ ಅವಶ್ಯ." ಉನ್ನತ ಶಿಕ್ಷಣವೆಂದರೆ ಕೇವಲ ಅಧ್ಯಯನವಲ್ಲ. ಉನ್ನತ ಶಿಕ್ಷಣದ ಉಪಯುಕ್ತತೆ ಯಾವುದೆಂದರೆ ಜೀವನದ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆ ಎಂಬುದನ್ನು ಕಲಿಯುವುದು.

ದೇಶದ ಉನ್ನತಿಯಲ್ಲಿ ಶಿಕ್ಷಣದ ಪಾತ್ರವೇನು? ಎಂಬ ಪ್ರಶ್ನೆಗೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಮಗೆ ಬೇಕಾಗಿರುವುದು, ವಿದೇಶಿ ನಿಯಂತ್ರಣದಿಂದ ಮುಕ್ತವಾದ ನಮ್ಮದೇ ಆದ ವಿವಿಧ ಜ್ಞಾನಶಾಖೆಗಳ ಅಧ್ಯಯನ. ಇದರ ಜೊತೆ ಇಂಗ್ಲಿಷ್ ಭಾಷೆ ಮತ್ತು ಪಾಶ್ಚಾತ್ಯ ವಿಜ್ಞಾನಗಳನ್ನೂ ಕಲಿಯಬೇಕು. ತಾಂತ್ರಿಕ ಶಿಕ್ಷಣ ಮತ್ತು ಕೈಗಾರಿಕೆಯನ್ನು ಬೆಳೆಸುವ ಎಲ್ಲ ವಿಧದ ತರಬೇತಿ ನಮಗೆ ಬೇಕಾಗಿದೆ. ಇದರಿಂದ ಜನ ತಾವೇ ದುಡಿದು ತಮ್ಮ ಜೀವನೋಪಾಯವನ್ನು ಸಂಪಾದಿಸಿಕೊಳ್ಳಬಹುದು .... ಶಿಕ್ಷಣ ಮತ್ತು ಬೌದ್ಧಿಕತೆ ಜನಸಾಮಾನ್ಯರಲ್ಲಿ ಹರಡಿದಷ್ಟೂ ದೇಶ ಮುಂದುವರಿಯುತ್ತದೆ. ಈ ಶಿಕ್ಷಣ-ಬೌದ್ಧಿಕತೆ ಕೆಲವೇ ವ್ಯಕ್ತಿಗಳ ಸ್ವತ್ತಾಗಿದೆ. ನಾವು ಉನ್ನತ ಮಟ್ಟಕ್ಕೆ ಏರಬೇಕಾದರೆ ಜನ ಸಾಮಾನ್ಯರಿಗೆ ಶಿಕ್ಷಣವನ್ನು ನೀಡಬೇಕು. ಶಿಕ್ಷಣದಿಂದ ಆತ್ಮ ಶ್ರದ್ಧೆ ಉಂಟಾಗುತ್ತದೆ ಮತ್ತು ಶ್ರದ್ಧೆಯಿಂದ ಅಂತಃಶಕ್ತಿ ಜಾಗೃತ ವಾಗುತ್ತದೆ."

ಪರೀಕ್ಷಾಸಾಮರ್ಥ್ಯ ಅಳತೆಗೋಲಾಗಿರುವ ನಮ್ಮ ಶಿಕ್ಷಣ ಪದ್ಧತಿಯಲ್ಲಿ, ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಗೊಳಿಸುವುದರ ಜೊತೆಗೆ, ಗುರುಶಿಷ್ಯಸಂಬಂಧವನ್ನು ಮಧುರಗೊಳಿಸುವ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವದ ಬೆಳವಣಿಗೆಗೆ ಪ್ರಾಮುಖ್ಯತೆ ಕೊಡಬೇಕು. ವಿದ್ಯಾರ್ಥಿಗಳು ತಾವು ತಿಳಿದುಕೊಂಡದ್ದನ್ನು ಎಷ್ಟರಮಟ್ಟಿಗೆ ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳುತ್ತಾರೆ ಎನ್ನುವುದು ಬಹಳ ಮುಖ್ಯ. ವಿದ್ಯಾಭ್ಯಾಸ ಪರಿಣಾಮಕಾರಿಯಾಗಬೇಕಾದರೆ ಶಿಕ್ಷಕರ ವ್ಯಕ್ತಿತ್ವವೂ ಮಹತ್ವದ ಪಾತ್ರ ವಹಿಸುತ್ತದೆ. ಸಮಾಜವು ಶಿಕ್ಷಕರ ಸೇವೆಯನ್ನು ಗುರುತಿಸಿ ಗೌರವಿಸಬೇಕು. ಶಿಕ್ಷಕ ವೃತ್ತಿ ಅಸಮರ್ಥರ ಕೊನೆಯ ಆಯ್ಕೆ ಆಗಬಾರದು. ಬೇರೆ ಎಲ್ಲ ವೃತ್ತಿ ಗಳೂ ಇತರೆ ವ್ಯಕ್ತಿಗಳ ಮೇಲೆ ತಾತ್ಕಾಲಿಕ ಪರಿಣಾಮ ಬೀರಿದರೆ ಶಿಕ್ಷಕವೃತ್ತಿ ಮಾತ್ರ ತಲೆಮಾರುಗಳ ಮೇಲೆ ಪರಿಣಾಮ ಬೀರುತ್ತದೆ. ಇಂದು ಮನೆಯಲ್ಲಿ ತಂದೆತಾಯಿಯರಿಬ್ಬರೂ ವೃತ್ತಿ ಜೀವನದಲ್ಲಿ ಮಗ್ನರಾಗಿರುವುದರಿಂದ ಹಾಗೂ ಹಿರಿಯರನ್ನು ವೃದ್ಧಾಶ್ರಮಗಳಲ್ಲೋ, ಹಳ್ಳಿಗಳಲ್ಲೋ ಬಿಡುವದರಿಂದ ಮಕ್ಕಳ ವ್ಯಕ್ತಿತ್ವದ ಮೇಲೆ ಶಿಕ್ಷಕರ ಪ್ರಭಾವವೇ ಹೆಚ್ಚು. ಆದ್ದರಿಂದ ಇರುವ ಶಿಕ್ಷಣ ವ್ಯವಸ್ಥೆಯನ್ನೇ ಅವಲಂಬಿಸಿಕೊಂಡು ನಿಷ್ಠೆಯಿಂದ ಮಕ್ಕಳ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯುತ ಶಿಕ್ಷಕರಿಂದ ನಮ್ಮ ಸಮಾಜ ಕೆಲವೇ ವರ್ಷಗಳಲ್ಲಿ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ.

ಪ್ರತಿಯೊಬ್ಬನಿಗೂ ತನ್ನ ಇಂದಿನ ಪರಿಸ್ಥಿತಿಯಲ್ಲಿ ಉತ್ತಮ ಸ್ಥಿತಿಗೆ ಬೆಳೆಯಲು ಅವಕಾಶವಿದೆ. ನಾವು ಸಂಪೂರ್ಣ ಬೇರೆ ಮನುಷ್ಯರಾಗಲು ಸಾಧ್ಯವಿಲ್ಲದೇ ಇರಬಹುದು, ನಮ್ಮಲ್ಲಿರುವ ಸಂಸ್ಕಾರಗಳನ್ನೆಲ್ಲಾ ನಾಶ ಮಾಡುವ ಸ್ಥಿತಿಯಲ್ಲಿ ಇಲ್ಲದೆ ಇರಬಹುದು, ಆದರೆ ನಮ್ಮ ಜೀವನಗತಿಯನ್ನು ಬೇರೆ ಮಾರ್ಗದಲ್ಲಿ ಹರಿಸುವ ಸ್ವಾತಂತ್ರ್ಯವಿದೆ. *—ಸ್ವಾಮಿ ವಿವೇಕಾನಂದ*